**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

<u>ಸ್ಪೆಷಲ್ ಮೊಕದ್ದಮೆ ನಂಃ **24/2022**</u>

| | | |
|---|---|---|
| ಸಾಕ್ಷಿದಾರರ ಹೆಸರು | - ಚೇತನ್ | ಪಿಡಬ್ಲೂ - 10 |
| ತಂದೆಯ ಹೆಸರು | - ಕೃಷ್ಣ ಶೆಟ್ಟಿ | ಸಿಡಬ್ಲೂ - 16 |
| ವಯಸ್ಸು | - 41 ವರ್ಷ | |
| ಉದ್ಯೋಗ | - ಕಬ್ಬಿನಹಳ್ಳಿ ಎಸ್ಟೇಟಿನಲ್ಲಿ ರೈಟರ್ | |
| ವಾಸ ಸ್ಥಳ | - ಕಬ್ಬಿನಹಳ್ಳಿ | |

ದಿನಾಂಕಃ 07-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

<u>ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-</u>

1. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್

ಶಶಿ ಅಲಿಯಾಸ್ ಶಶಿಕುಮಾರ ಗೊತ್ತು. ಪ್ರಾಸಾ.2 ಗೊತ್ತು, ಅವರು ಮೃತನ ತಂದೆ. ಪ್ರಾಸಾ.8 ಮತ್ತು 9 ಗೊತ್ತು. ಈಗ್ಗೆ 10 ವರ್ಷಗಳಿಂದ ನಾನು ಕಬ್ಬಿನಹಳ್ಳಿಯಲ್ಲಿರುವ ಅವರ ಎಸ್ಟೇಟಿನಲ್ಲಿ ರೈಟರ್ ಆಗಿ ಕೆಲಸ ಮಾಡಿಕೊಂಡಿದ್ದೇನೆ.

2. ಘಟನೆಯ ಒಂದು ವಾರದ ಹಿಂದೆ ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರ ಸದರಿ ಎಸ್ಟೇಟಿಗೆ ಕೆಲಸ ಕೇಳಿಕೊಂಡು ಬಂದಿದ್ದರು. ಆಗ ನಮ್ಮ ಮಾಲೀಕರು ಅವರಿಗೆ ಕೆಲಸವನ್ನು ಕೊಟ್ಟರು. ಎಸ್ಟೇಟಿನ ಕೂಲಿ ಲೈನ್‌ನಲ್ಲಿರುವ ಮೊದಲನೆ ಮನೆಯಲ್ಲಿ ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರವರಿಗೆ ಉಳಿದುಕೊಳ್ಳಲು ಹೇಳಿ ಅದರ ಕೀಯನ್ನು ನನಗೆ ಕೊಟ್ಟು ಸದರಿ ಮನೆಯನ್ನು ಅವರಿಗೆ ತೋರಿಸುವಂತೆ ಮಾಲೀಕರು ನನಗೆ ಹೇಳಿದರು. ಅದರಂತೆ ನಾನು ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರನ್ನು ಮೇಲೆ ಹೇಳಿದ ಕೂಲಿ ಲೈನ್ ಮನೆಗೆ ಕರೆದುಕೊಂಡು ಹೋಗಿ ಅದರ ಬೀಗವನ್ನು ತೆಗೆದು ಕೊಟ್ಟೆನು. ಸದರಿ ಮನೆಯಲ್ಲಿ ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರು ಒಟ್ಟಿಗೆ ಉಳಿದುಕೊಂಡಿದ್ದರು.

3. ದಿಃ 17-11-2021 ರಂದು ಎಸ್ಟೇಟಿನಲ್ಲಿ ಬಟವಾಡೆ ಇತ್ತು ಮತ್ತು ಆ ದಿನ ಕೆಲಸಗಾರರಿಗೆ ರಜೆ ಇತ್ತು. ಬಟವಾಡೆಯಾದ ನಂತರ ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರು ಚಿಕ್ಕಮಗಳೂರಿನ ಸಂತೆಗೆ

ಹೋಗಿ ಬಂದಿದ್ದರು. ನನ್ನ ಹೆಂಡತಿ ತವರು ಮನೆಗೆ ಹೋಗಿದ್ದಳು, ಹಾಗಾಗಿ ಆ ದಿನ ನಾನು ಮನೆಯಲ್ಲಿ ಒಬ್ಬನೇ ಇದ್ದೆನು. ಆ ದಿನ ಸಂಜೆ 4.30 ಗಂಟೆ ಸುಮಾರಿಗೆ ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರು ಅಡುಗೆ ಮಾಡುವ ವಿಚಾರಕ್ಕೆ ಜೋರು ಜೋರಾಗಿ ಮಾತನಾಡುತ್ತಾ ಜಗಳ ಮಾಡಿಕೊಳ್ಳುತ್ತಿದ್ದರು. ಗಲಾಟೆಯ ಶಬ್ಧ ಕೇಳಿ ನಾನು ಅವರು ವಾಸವಾಗಿದ್ದ ಕೂಲಿ ಲೈನ್ ಮನೆಗೆ ಹೋಗಿ ಇಬ್ಬರನ್ನು ಕರೆದು ಯಾಕೆ ಜಗಳ ಮಾಡಿಕೊಳ್ಳುತ್ತಿದ್ದೀರಿ ಎಂದು ಕೇಳಿದೆನು. ಆಗ ಆರೋಪಿ ಅಡುಗೆ ಮಾಡುತ್ತಿದ್ದಾಗಿ, ಶಶಿ ಅಡುಗೆ ಚೆನ್ನಾಗಿಲ್ಲವೆಂದು ಹೇಳಿದ್ದಾಗಿ, ಈ ದಿನ ಮಾಂಸವನ್ನು ತಂದಿದ್ದೇನೆ ಅದನ್ನಾದರೂ ಚೆನ್ನಾಗಿ ಮಾಡು ಎಂದು ಶಶಿ ಆರೋಪಿಗೆ ಹೇಳಿದ ವಿಚಾರಕ್ಕೆ ಅವರು ಗಲಾಟೆ ಮಾಡುತ್ತಿದ್ದಾಗಿ ಹೇಳಿದರು. ಆಗ ನಾನು ಅವರನ್ನು ಕುರಿತು ಮತ್ತೆ ಗಲಾಟೆ ಮಾಡಿಕೊಳ್ಳಬೇಡಿ, ಮಾಡಿಕೊಂಡರೆ ಸಾಹುಕಾರರಿಗೆ ಹೇಳುತ್ತೇನೆ ಎಂದು ಹೇಳಿ ಅಲ್ಲಿಂದ ಸಾಹುಕಾರರ ಮನೆಗೆ ಹೋದೆನು. ಅಲ್ಲಿದ್ದ ಫ್ರಾಸಾ.9 ರವರಿಗೆ ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರ ಜಗಳ ಮಾಡಿಕೊಳ್ಳುತ್ತಿದ್ದ ವಿಚಾರವನ್ನು ತಿಳಿಸಿದೆನು. ನಂತರ ನಾನು ನಮ್ಮ ಮನೆಗೆ ವಾಪಸ್ ಹೋದೆನು.

4. ಮಾರನೆ ದಿನ ಅಂದರೆ ದಿಃ 18-11-2021 ರಂದು ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರ ಕೆಲಸಕ್ಕೆ ಬಂದಿರಲಿಲ್ಲ. ನಾನು ಆ ವಿಚಾರವನ್ನು

ನಮ್ಮ ಮಾಲೀಕರಿಗೆ ತಿಳಿಸಿದೆನು. ಸಂಜೆಯಾದರೂ ಅವರು ಕೆಲಸಕ್ಕೆ ಬಾರದ ಕಾರಣ ಸಂಜೆ 6 ಗಂಟೆ ಸುಮಾರಿಗೆ ಸಾಹುಕಾರರು ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರ ಯಾಕೆ ಕೆಲಸಕ್ಕೆ ಬಂದಿಲ್ಲವೆಂದು ಅವರ ಕೂಲಿ ಲೈನ್ ಮನೆಗೆ ಹೋಗಿ ನೋಡಿಕೊಂಡು ಬಾ ಎಂದು ನನಗೆ ಹೇಳಿದರು.

5. ಅದರಂತೆ ನಾನು ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರು ವಾಸವಾಗಿದ್ದ ಕೂಲಿ ಲೈನ್ ಮನೆಯ ಹತ್ತಿರ ಹೋದೆನು. ಅವರ ಮನೆಯ ಬಾಗಿಲು ಮುಂದಕ್ಕೆ ಹಾಗೆ ಹಾಕಿದಂತೆ ಕಂಡುಬಂತು. ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರ ರವರ ಹೆಸರನ್ನು ಹಿಡಿದು ಕೂಗಿ ಕರೆದೆನು, ಆದರೆ ಯಾರು ಮಾತನಾಡಲಿಲ್ಲ. ಹಾಗಾಗಿ ನಾನು ಅವರ ಮನೆಯ ಕಿಟಕಿಯಲ್ಲಿ ನನ್ನ ಬಳಿ ಇದ್ದ ಟಾರ್ಚ ಬಿಟ್ಟು ನೋಡಿದಾಗ ಮನೆಯ ಒಳಗೆ ಗೋಡೆಯ ಪಕ್ಕದಲ್ಲಿ ಯಾರೋ ಮಲಗಿದಂತೆ ಇತ್ತು, ಅವರ ಪಕ್ಕದಲ್ಲಿ ನೆಲದಲ್ಲಿ ಮತ್ತು ಗೋಡೆಯ ಮೇಲೆ ರಕ್ತ ಇರುವುದು ಕಂಡುಬಂತು. ಆಗ ನಾನು ಕೂಡಲೇ ಫ್ರಾಸಾ.9 ವಾಸುದೇವ್‌ರವರಿಗೆ ಫೋನ್ ಮಾಡಿ ವಿಚಾರವನ್ನು ತಿಳಿಸಿ ಬೇಗ ಬನ್ನಿ ಎಂದು ಕರೆದೆನು. ನಂತರ ಫ್ರಾಸಾ.9 ಮತ್ತು ಅವರ ತಂದೆಯಾದ ಫ್ರಾಸಾ.8 ರವರು ಅಲ್ಲಿಗೆ ಬಂದರು. ಅವರು ಸಹ ಕಿಟಕಿಯಲ್ಲಿ ಟಾರ್ಚ ಬಿಟ್ಟು ನೋಡಿದರು. ಅವರಿಗೂ ಸಹ ಅದೇ ದೃಶ್ಯ ಕಂಡುಬಂತು. ಫ್ರಾಸಾ.9 ರವರು ಮನೆಯ ಒಳಗೆ

ಹೋಗಲಿಲ್ಲ ಮತ್ತು ನನಗೂ ಮತ್ತು ಪ್ರಾಸಾ.8 ರವರಿಗೂ ಒಳಗೆ ಹೋಗುವುದು ಬೇಡ ಇಲ್ಲಿಯೇ ಇರಿ ಎಂದು ಹೇಳಿ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರಿಗೆ ಫೋನ್ ಮಾಡಿ ಮಾಹಿತಿಯನ್ನು ತಿಳಿಸಿದರು.

6. ನಂತರ ರಾತ್ರಿ 8 ಗಂಟೆ ಸುಮಾರಿಗೆ ಪೊಲೀಸರು ಅಲ್ಲಿಗೆ ಬಂದರು. ಅವರೊಂದಿಗೆ ಸಾಹುಕಾರರು ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರು ವಾಸವಾಗಿದ್ದ ಕೂಲಿ ಮನೆಯ ಒಳಗೆ ಹೋಗಿ ಟಾರ್ಚ ಬೆಳಕಿನಲ್ಲಿ ನೋಡಿದರು. ಆಗ ಹಾಲ್ ನ ಗೋಡೆಯ ಪಕ್ಕದಲ್ಲಿ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರ ಮೃತ ದೇಹ ಇರುವುದು ಕಂಡುಬಂತು. ಆತನ ತಲೆ, ಕುತ್ತಿಗೆ ಮತ್ತು ಹೊಟ್ಟೆಯ ಭಾಗಗಳಿಗೆ ಗಾಯವಾಗಿ ರಕ್ತಬಂದಿತ್ತು, ಆತನನ್ನು ಯಾರೋ ಕೊಲೆ ಮಾಡಿರುವುದು ಕಂಡುಬಂತು. ಆ ಸಮಯದಲ್ಲಿ ಅಲ್ಲಿ ಆರೋಪಿ ಇರಲಿಲ್ಲ. ಆ ಬಗ್ಗೆ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರ ತಂದೆ ಪೊಲೀಸರಿಗೆ ದೂರನ್ನು ಕೊಟ್ಟರು.

7. ನಂತರ ಪೊಲೀಸರು ಆರೋಪಿಯನ್ನು ಆರೇಸ್ಟ ಮಾಡಿದರು. ಆರೋಪಿಯೇ ತಾನೇ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರನನ್ನು ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದ ಬಗ್ಗೆ ನನಗೆ ತಿಳಿಯಿತು.

8. ನಮ್ಮ ಎಸ್ಟೇಟಿನ ಕೂಲಿ ಕೆಲಸಗಾರರ ಹಾಜರಾತಿ ಪುಸ್ತಕವನ್ನು ನಾನು ನಿರ್ವಹಿಸುತ್ತೇನೆ. ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರು ನಮ್ಮ ಎಸೆಟೆಟಿನಲ್ಲಿ ಕೆಲಸಕ್ಕೆ ಸೇರಿಕೊಂಡ ಬಳಿಕ ಸಾಹುಕಾರರು ಹೇಳಿದಂತೆ ಅವರ ಹೆಸರನ್ನು ಸದರಿ ಪುಸ್ತಕದಲ್ಲಿ ನಮೂದು ಮಾಡಿದ್ದೇನೆ. ಪ್ರತಿದಿನ ಅವರ ಮತ್ತು ಇತರೆ ಕೂಲಿ ಕೆಲಸಗಾರರ ಹಾಜರಾತಿಯನ್ನು ನಾನು ಅದರಲ್ಲಿ ನಮೂದು ಮಾಡುತ್ತಿದ್ದೆನು. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿ.22 ಎಂದು ಗುರುತಿಸಲ್ಪಟ್ಟಿರುವ ಹಾಜರಾತಿ ಪುಸ್ತಕದ ನೈಜ ಪ್ರತಿಯನ್ನು ನೋಡಿ ಅದು ನಾನು ನಮ್ಮ ಎಸ್ಟೇಟಿನ ಕೂಲಿ ಕೆಲಸಗಾರರಿಗೆ ನಿರ್ವಹಿಸುತ್ತಿದ್ದ ಹಾಜರಾತಿ ಪುಸ್ತಕದ ಪ್ರತಿ ಎಂದು ನುಡಿದಿರುತ್ತಾರೆ. ಅದರಲ್ಲಿರುವ ಬರವಣಿಗೆ ನನ್ನದು. ಅದರಲ್ಲಿ ಕೊನೆಯಿಂದ 2 ಮತ್ತು 3 ನೇ ಕಲಂನಲ್ಲಿ ಆರೋಪಿ ಮನು ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರವರ ಹೆಸರು ನಮೂದು ಆಗಿರುವುದು ಕಂಡುಬರುತ್ತದೆ.

9. ನಂತರ ಪೊಲೀಸರು ನನ್ನನ್ನು ವಿಚಾರಿಸಿದರು, ಆಗ ನಾನು ಅವರಿಗೆ ನನಗೆ ಗೊತ್ತಿದ್ದ ವಿಚಾರವನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ. ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರು ನಮ್ಮ ಎಸ್ಟೇಟಿನ ಒಂದು ಕೂಲಿ ಲೈನ್ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದರು. ಅವರು ಇಬ್ಬರು ಜಗಳ ಮಾಡುತ್ತಿದ್ದನ್ನು ನಾನು ಕೊನೆಯ ಬಾರಿಗೆ ನೋಡಿದ್ದೇನೆ.

10. ನಂತರ ಪೊಲೀಸರು ಚಿಕ್ಕಮಗಳೂರಿನ ನ್ಯಾಯಾಧೀಶರ ಬಳಿ ಹಾಜರುಪಡಿಸಿದ್ದರು. ಸದರಿ ನ್ಯಾಯಾಧೀಶರು ನನ್ನನ್ನು ವಿಚಾರಿಸಿದಾಗ ನಾನು ಅವರಿಗೆ ನಡೆದ ವಿಚಾರವನ್ನು ತಿಳಿಸಿ ಹೇಳಿಕೆ ಕೊಟ್ಟೆನು.

11. ಸಾಕ್ಷಿ ಈಗಾಗಲೇ ನಿಪಿ.3 ರಿಂದ ಪಿ.5 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ನೋಡಿ ಅವುಗಳಲ್ಲಿ ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರು ವಾಸವಾಗಿದ್ದ ಕೂಲಿ ಲೈನ್ ಮನೆಯಲ್ಲಿ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರರವರ ಕೊಲೆಯಾಗಿರುವುದು ಕಂಡುಬರುತ್ತದೆ ಎಂದು ನುಡಿದಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್. ವಕೀಲರಿಂದಃ-</u>

(ಈ ಹಂತದಲ್ಲಿ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ ಕೇಳಿಸುತ್ತಿದೆಯೇ ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

12. ನೀವು ಪ್ರಾಸಾ.8 ಮತ್ತು 9 ರವರ ತೋಟದಲ್ಲಿ ರೈಟರ್ ಆಗಿ ಕೆಲಸ ಮಾಡುತ್ತಿದ್ದೀರಿ ಎಂದು ತೋರಿಸಲು ಯಾವುದಾದರೂ ದಾಖಲೆ ಇದಯೇ ಎಂದರೆ ಸಾಕ್ಷಿ ಇಲ್ಲ

ಎನ್ನುತ್ತಾರೆ. ನೀವು ಮೂಲತಃ ಉಳುವಾಗಿಲು ಗ್ರಾಮದವರು ಎಂದರೆ ಸರಿ. ಸೀಜನ್ ನಲ್ಲಿ ನಿಮ್ಮ ಎಸ್ಟೇಟಿನಲ್ಲಿ 100 ರಿಂದ 150 ಜನರು ಕಾಫಿ ಕೊಯ್ಯಿಲಿಗೆ ಬರುತ್ತಾರೆ ಎಂದರೆ ಸಾಕ್ಷಿ 50 ರಿಂದ 70 ಜನ ಬರುತ್ತಾರೆ ಎನ್ನುತ್ತಾರೆ. ಆ ರೀತಿ ಕೆಲಸಕ್ಕೆ ಬರುವವರೆಲ್ಲರ ಹಾಜರಾತಿಯನ್ನು ಪಡೆಯಲಾಗುತ್ತದೆ ಎಂದರೆ ಸಾಕ್ಷಿ ಹೊರಗಿನಿಂದ ಬರುವವರ ಹಾಜರಾತಿಯನ್ನು ಪಡೆಯುವುದಿಲ್ಲ, ಆದರೆ ಕೂಲಿ ಲೈನ್ ಮನೆಯಲ್ಲಿ ಉಳಿದುಕೊಂಡವರ ಹಾಜರಾತಿಯನ್ನು ಮಾತ್ರ ಪಡೆಯಲಾಗುತ್ತದೆ ಎನ್ನುತ್ತಾರೆ. ನಿಮ್ಮ ಎಸ್ಟೇಟಿನ ಕೂಲಿ ಲೈನ್ ಮನೆಯಲ್ಲಿ 70 ರಿಂದ 80 ಜನರಿಗೆ ಉಳಿದುಕೊಳ್ಳಲು ವವಸ್ಥೆ ಇದೆ ಎಂದರೆ ಸಾಕ್ಷಿ 30 ರಿಂದ 40 ಜನರು ಉಳಿದುಕೊಳ್ಳಲು ಮಾತ್ರ ವ್ಯವಸ್ಥೆ ಇದೆ ಎನ್ನುತ್ತಾರೆ. ಸಿಜನ್ ನಲ್ಲಿ ಎಲ್ಲಾ ಕೂಲಿ ಲೈನ್ ಮನೆಗಳು ಭರ್ತಿಯಾಗಿರುತ್ತದೆ ಎಂದರೆ ಸರಿ. ಎಸ್ಟೇಟಿನ ಖಾಯಂ ಕೆಲಸಗಾರರ ಹಾಜರಾತಿಯನ್ನು ಪಡೆಯಲಾಗುತ್ತದೆ ಎಂದರೆ ಸರಿ. ಹಂಗಾಮಿ ಕೆಲಸಗಾರರ ಹಾಜರಾತಿಯನ್ನು ಪಡೆಯಲಾಗುವುದಿಲ್ಲ ಎಂದರೆ ಸರಿ.

13. ನಿಪಿ.22 ರ ಪ್ರಕಾರ 31 ಖಾಯಂ ಕೆಲಸಗಾರರ ಹಾಜರಾತಿಯನ್ನು ಪಡೆಯಲಾಗಿದೆ ಎಂದರೆ ಸರಿ. ಸಾಮಾನ್ಯವಾಗಿ ಹಾಜರಾತಿಯನ್ನು ತೆಗೆದುಕೊಳ್ಳುವವರು ವಹಿಯಲ್ಲಿ ತಮ್ಮ ಸಹಿಯನ್ನು ಮಾಡುತ್ತಾರೆ ಎಂದರೆ ಸರಿ. ನೀವು ಹಾಜರಾತಿಯನ್ನು ತೆಗೆದುಕೊಂಡಿದ್ದೀರಿ ಎಂದು ತೋರಿಸಲು ನಿಪಿ.22 ರಲ್ಲಿ ನಿಮ್ಮ ಸಹಿ ಇಲ್ಲ ಎಂದರೆ ಸರಿ. ಹಾಗಾಗಿ ನಿಪಿ.22

ದಾಖಲೆ ಎಲ್ಲಿ ತಯಾರಾಗಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಅದನ್ನು ನಾನೇ ನಿರ್ವಹಿಸಿದ್ದೇನೆ ಎನ್ನುತ್ತಾರೆ.

14. ರಾತ್ರಿ ಪೊಲೀಸರು ಬಂದಾಗ ನನ್ನನ್ನು ವಿಚಾರಿಸಿದರು. ಆದರೆ ಆ ಬಗ್ಗೆ ಬರವಣಿಗೆ ಮಾಡಿಕೊಂಡಿಲ್ಲ. ಮಾಲೀಕರು ಮತ್ತು ಇನ್ನಿಬ್ಬರನ್ನು ವಿಚಾರಿಸಿದರು ಮತ್ತು ಆ ಬಗ್ಗೆ ಬರವಣಿಗೆ ಮಾಡಿಕೊಂಡರು. ನಂತರ ಪೊಲೀಸರು ಫೋಟೋಗಳನ್ನು ತೆಗೆದುಕೊಂಡು ಶವವನ್ನು ಅಲ್ಲಿಂದ ಸಾಗಿಸಿದರು ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ಮೃತನ ಸಂಬಂಧಿಕರು ಮತ್ತು ಗ್ರಾಮಸ್ಥರನ್ನು ಅಲ್ಲಿಗೆ ಕರೆಸಿದ್ದರು ಎಂದರೆ ಸರಿ. ನಿಮ್ಮ ಸಮಕ್ಷಮ ಮೃತನ ಸಂಬಂಧಿಕರನ್ನು ವಿಚಾರಿಸಿ ಬರವಣಿಗೆ ಮಾಡಿಕೊಂಡರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

15. ಮಾರನೆ ದಿನ ಎಂದಿನಂತೆ ಕಾಫಿ ಕೊಯ್ಯುವ ಕೆಲಸ ನಡೆದಿತ್ತು ನಂತರ ಏನಾಯಿತು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ಆ ದಿನ ನಾನು ತೋಟಕ್ಕೆ ಹೋಗಿದ್ದೆನು. ಆ ದಿನ ರಾತ್ರಿ ಪೊಲೀಸರು ನಿಮ್ಮನ್ನು ವಿಚಾರಿಸಿದ್ದನ್ನು ಹೊರತುಪಡಿಸಿ ಬೇರೆ ಎಂದಿಗೂ ನಿಮ್ಮನ್ನು ವಿಚಾರಿಸಿಲ್ಲ ಎಂದರೆ ಸರಿ.

16. ನೀವು ನ್ಯಾಯಾಧೀಶರಿಗೆ ನೀಡಿದ್ದೀರಿ ಎನ್ನಲಾದ ಹೇಳಿಕೆಯಲ್ಲಿ ಆರೋಪಿ ಮತ್ತು ಶೇಷಪ್ಪ ಒಟ್ಟಿಗೆ ವಾಸವಾಗಿದ್ದರು ಎಂದು ತಿಳಿಸಿಲ್ಲ ಎಂದರೆ ಸಾಕ್ಷಿ ಅವರಿಬ್ಬರು ಒಂದೇ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದರು ಎನ್ನುತ್ತಾರೆ.

17. ನಿಮ್ಮ ಎಸ್ಟೇಟಿಗೆ ಗೇಟ್ ಇದೆ ಎಂದರೆ ಸರಿ. ಅದನ್ನು ಸಂಜೆ 5.30 ಗಂಟೆಗೆ ಬಂದ್ ಮಾಡಲಾಗುತ್ತದೆ ಎಂದರೆ ಸರಿ. ನಂತರ ಎಸ್ಟೇಟಿಗೆ ಯಾರೇ ಬರಬೇಕಾದರು ಮಾಲೀಕರ ಅನುಮತಿಯನ್ನು ಪಡೆಯಬೇಕಾಗುತ್ತದೆ ಎಂದರೆ ಸರಿ. ಸಂಜೆಯಾದ ಬಳಿಕ ಎಸ್ಟೇಟಿನಲ್ಲಿರುವ ಕೂಲಿ ಜನರು ಎಸ್ಟೇಟಿನಲ್ಲಿ ಓಡಾಡಿಕೊಂಡು ಮಾತನಾಡುವುದು, ಹಾಡು ಹೇಳುವುದು ಮಾಡುತ್ತಾರೆ ಎಂದರೆ ಸಾಕ್ಷಿ ಅವರವರ ಮನೆಯಲ್ಲಿ ಮಾಡಿಕೊಳ್ಳುತ್ತಾರೆ ಎನ್ನುತ್ತಾರೆ. ಹೆಚ್ಚು ಜನರು ಇದ್ದ ಪಕ್ಷದಲ್ಲಿ ಕೂಲಿ ಲೈನ್ ಮನೆಗಳಲ್ಲಿ ಜೋರು ಜೋರಾಗಿ ಮಾತನಾಡುವುದು ಇರುತ್ತದೆ ಎಂದರೆ ಸರಿ.

18. ನೀವು ಫ್ರಾಸಾ.8 ಮತ್ತು 9 ರವರ ಎಸ್ಟೇಟಿನಲ್ಲಿ ರೈಟರ್ ಆಗಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿ. ಫ್ರಾಸಾ.9 ರವರು ಪ್ರತ್ಯೇಕ ಫೈನಾನ್ಸ ವ್ಯವಹಾರವನ್ನು ಮಾಡಿಕೊಂಡಿದ್ದು ನೀವು ಅವರಡಿ ಕೆಲಸ ಮಾಡುತ್ತಿದ್ದೀರಿ ಹೊರತು ಎಸ್ಟೇಟಿನಲ್ಲಿ ರೈಟರ್ ಆಗಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಕಬ್ಬಿನಹಳ್ಳಿಎಸ್ಟೇಟಿನಲ್ಲಿ ಕೆಲಸ ಮಾಡಿಕೊಂಡಿಲ್ಲ ಮತ್ತು ಅಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಎಸ್ಟೇಟಿನಲ್ಲಿ ನನಗೆ ಉಳಿದುಕೊಳ್ಳಲು ಮನೆಯನ್ನು ನೀಡಲಾಗಿದೆ ಮತ್ತು ನಾನು ಅದರಲ್ಲಿ ವಾಸವಾಗಿದ್ದೇನೆ ಎನ್ನುತ್ತಾರೆ.

19. ಆರೋಪಿ ಮನು ಬಗ್ಗೆ ಫ್ರಾಸಾ.8 ರವರಿಗೆ ಮೊದಲಿನಿಂದಲೂ ತಿಳಿದಿತ್ತು ಎಂದರೆ ಸರಿ. ಆ ವಿಚಾರವನ್ನು ಫ್ರಾಸಾ.8 ರವರು ನಿಮಗೆ ತಿಳಿಸಿದ್ದರು ಎಂದರೆ ಸಾಕ್ಷಿ ಆಗ್ಗೆ

2 ರಿಂದ 3 ವರ್ಷಗಳ ಹಿಂದೆ ಆರೋಪಿ ಅವರ ತೋಟಕ್ಕೆ ಕೆಲಸಕ್ಕೆ ಬಂದು ಹೋಗಿದ್ದಾಗಿ ತಿಳಿಸಿದ್ದರು ಎನ್ನುತ್ತಾರೆ. ಫ್ರಾಸಾ.8 ರವರ ಎಸ್ಟೇಟಿನಲ್ಲಿ ದನಗಳನ್ನು ಸಾಕುವ ಕೊಟ್ಟಿಗೆ ಇದೆ ಎಂದರೆ ಸರಿ. ಫ್ರಾಸಾ.9 ರವರು ಹೇಳಿದ ಮೇರೆಗೆ ನೀವು ನಿಪಿ.22 ದಾಖಲೆಯನ್ನು ಬರೆದುಕೊಟ್ಟಿದ್ದೀರಿ ಎಂದರೆ ಸರಿಯಲ್ಲ.

20. ದಿಃ 17-11-2021 ರಂದು ಸಂಜೆ ಆರೋಪಿ ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರ ಗಲಾಟೆ ಮಾಡಿಕೊಳ್ಳುತ್ತಿದ್ದಾಗಿ ನೀವು ಅಲ್ಲಿಗೆ ಹೋಗಿ ಅವರನ್ನು ವಿಚಾರಿಸಿದ್ದಾಗಿ, ಅವರು ಅಡುಗೆ ವಿಚಾರಕ್ಕೆ ಗಲಾಟೆ ಮಾಡಿಕೊಳ್ಳುತ್ತಿದ್ದಾಗಿ ನಿಮಗೆ ಹೇಳಿದ್ದಾಗಿ, ನಂತರ ನೀವು ಸದರಿ ವಿಚಾರವನ್ನು ನಿಮ್ಮ ಮಾಲೀಕರಿಗೆ ತಿಳಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಈ ದಿನ ನೀವು ಪೊಲೀಸರನ್ನು ಭೇಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಅವರು ಹೇಳಿಕೊಟ್ಟಂತೆ ಈ ದಿನ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಯಾವ ದಿನಾಂಕದಂದು ಸಮನ್ಸ್ ನನಗೆ ಜಾರಿಯಾಗಿತ್ತು ಎಂದು ನನಗೆ ಗೊತ್ತಿಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಫ್ರಾಸಾ.8 ಮತ್ತು 9 ರವರಿಗೆ ಸಹಾಯ ಮಾಡಲು ಅವರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ